ದಿನಾಂಕಃ24.06.2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು 1(ಎ) ಪ್ರತಿವಾದಿಗಳ ಪರ ಶ್ರೀ ಜಿ ಕೆ ಎಂ ವಕೀಲರಿಂದಃ**

ಗೊಲ್ಲರ ಕರಿಯಪ್ಪನಿಗೆ ಒಟ್ಟು ಮೂರು ಮನೆಗಳು ಮತ್ತು 15 ಎಕರೆ ಆಸ್ತಿ ಇದೆ. ಸದರಿ ಮೂರು ಮನೆಗಳ ಖಾತೆ ಅಜ್ಜಪ್ಪನ ಹೆಸರಿಗೆ ಇದೆ. ಸದರಿ ಮೂರು ಮನೆಗಳು ಬಿದರೆಕೆರೆಯಲ್ಲಿ ಒಂದು ಬಾಲೇನಹಳ್ಳಿಯಲ್ಲಿ 2 ಇವೆ. ಬಿದರಕೆರೆಯಲ್ಲಿರುವ ಮನೆ ಹಂಚಿನ ಮನೆಯಾಗಿದ್ದು ಅದರ ಉದ್ದ ಮತ್ತು ಅಳತೆ ಹೇಳಲು ಬರುವುದಿಲ್ಲ. ಅದರ ಚೆಕ್ಕು ಬಂದಿ ಹೇಳಲು ಬರುವುದಿಲ್ಲ. ಬಿದರಕೆರೆಯಲ್ಲಿರುವ ಮನೆಯಲ್ಲಿ ಚಂದ್ರಪ್ಪ ವಾಸವಾಗಿದ್ದಾರೆ. ಬಾಲೇಹಳ್ಳಿಯಲ್ಲಿ 2 ಶೀಟಿನ ಮನೆಗಳು ಇವೆ. ಅವುಗಳ ಉದ್ದ ಅಳತೆ ಹೇಳಲು ಆಗುವುದಿಲ್ಲ. ಒಂದು ಮನೆಯ ಚೆಕ್ಕು ಬಂದಿ – ಹೊತ್ತು ಹುಟ್ಟುವ ಕಡೆ ಓಬಣ್ಣನ ಮನೆ, ಸೂರ್ಯ ಮುಳುಗುವ ಕಡೆ ಅಜ್ಜಪ್ಪನ ಮನೆ, ಬಡಗಣಕ್ಕೆ ರಸ್ತೆ, ಉತ್ತರಕ್ಕೆ ಊರ ಇದೆ. ಮೇಲೆ ಹೇಳಿದ ಚೆಕ್ಕು ಬಂದಿ ಮನೆಯಲ್ಲಿ ಓಬಣ್ಣ ವಾಸ ಮಾಡುತ್ತಾನೆ. ಇನ್ನೊಂದು ಮನೆಯ ಚೆಕ್ಕು ಬಂದಿ ಪೂರ್ವಕ್ಕೆ ರಸ್ತೆ , ಪಶ್ಚಿಮಕ್ಕೆ ಗಂಗಮ್ಮನ ಮಗ, ಉತ್ತರಕ್ಕೆ ತಿಮ್ಮಣ್ಣನ ಮನೆ, ದಕ್ಷಿಣಕ್ಕೆ ನಿಜಲಿಂಗಪ್ಪನ ಮನೆ ಇದೆ. ಈ ಮನೆಯಲ್ಲಿ ಮಂಜಪ್ಪ ವಾಸ ಮಾಡುತ್ತಿದ್ದಾನೆ. ಸರ್ವೆ ನಂ.106/2 ಮೂಲತಃ ಕರಿಯಜ್ಜನ ಹೆಸರಿನಲ್ಲಿ ಇತ್ತು. ಕರಿಯಜ್ಜನ ಮರಣಾ ನಂತರ ಅವರ ಮೊದಲ ಮಗ ಅಜ್ಜಪ್ಪನ ಹೆಸರಿಗೆ ಪೌತಿ ಖಾತೆಯಾಯಿತು ಎಂದರೆ ನಿಜ. ಸದರಿ ಅಜ್ಜಪ್ಪ ಯಾವಾಗ ಮೃತ ಪಟ್ಟರು ಎಂದು ಗೊತ್ತಿಲ್ಲ. ಅಜ್ಜಪ್ಪ 2001 ರಲ್ಲಿ ಮೃತ ಪಟ್ಟರು ಎಂದರೆ ನಿಜ. ಕರಿಯಜ್ಜ ಜೀವಂತ ಇದ್ದಾಗ ಕರಿಯಜ್ಜ ಮತ್ತು ಆತನ 6 ಜನ ಮಕ್ಕಳು ಒಟ್ಟಾಗಿ ಜೀವನ ಮಾಡುತ್ತಿದ್ದರು ಎಂದರೆ ಸರಿ. 17 ಎಕರೆ ಜಮೀನನ್ನು ಕರಿಯಜ್ಜ ಮತ್ತು ಮಕ್ಕಳು ಒಟ್ಟಾಗಿ ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಕರಿಯಜ್ಜ ಮತ್ತು ಅವರ ಮಕ್ಕಳು ಒಟ್ಟಾಗಿ ವ್ಯವಸಾಯ ಮಾಡುತ್ತಿದ್ದ ವಿಚಾರ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕರಿಯಜ್ಜ ತೀರಿಕೊಂಡ ಸಮಯದಲ್ಲಿ ನಾನು ಹುಟ್ಟಿರುವುದಿಲ್ಲ. ನಾನು ಕರಿಯಜ್ಜನನ್ನು

ನೋಡಿಲ್ಲ. ಹಾಗಾಗಿ ಕರಿಯಜ್ಜ ಮತ್ತು ಆತನ ಮಕ್ಕಳು ಒಟ್ಟಾಗಿ ವ್ಯವಸಾಯ ಮಾಡುತ್ತಿರುವುದನ್ನು ನಾನು ನೋಡಿಲ್ಲ , ಆ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಕರಿಯಪ್ಪ ಮತ್ತು ಅವರ ಮಕ್ಕಳು ಒಟ್ಟಾಗಿ ವಾಸ ಮಾಡುತ್ತಿರಲಿಲ್ಲ ಎಂಬ ವಿಚಾರನ್ನು ನನ್ನ ತಂದೆ ನನಗೆ ಹೇಳಿರುತ್ತಾರೆ. ಕರಿಯಜ್ಜ ಮೃತ ಪಟ್ಟ ನಂತರ ಅವರ 6 ಜನ ಮಕ್ಕಳು ಒಟ್ಟಾಗಿ ದಾವಾಸ್ತಿಯನ್ನು ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಅಜ್ಜಪ್ಪನ ಹೆಂಡತಿ ಪಾತಮ್ಮ ಸುಮಾರು 40 ವರ್ಷಗಳ ಹಿಂದೆ ಮೃತ ಪಟ್ಟಿದ್ದಾರೆ ಎಂದರೆ ಸರಿ. ಕರಿಯಪ್ಪನ 2 ನೇ ಮಗ ದೊಣ್ಣೆ ಓಬಣ್ಣ ಯಾವಾಗ ಮೃತ ಪಟ್ಟರು ಎಂದು ಗೊತ್ತಿಲ್ಲ. ಕರಿಯಪ್ಪನ 6 ಜನ ಮಕ್ಕಳು ಮೂರು ಮನೆಗಳನ್ನು ಮತ್ತು ಜಮೀನನ್ನು ಹಂಚಿಕೊಂಡಿರಲಿಲ್ಲ ಎಂದರೆ ಸರಿಯಲ್ಲ. ನಾನು ಸಣ್ಣವನಿದ್ದಾಗಲೇ ಹಂಚಿಕೊಂಡಿದ್ದರು, ಅಜ್ಜಪ್ಪ, ದೊಣ್ಣೆ ಓಬಣ್ಣ, ಕುರುಡು ಓಬಣ್ಣ, ಸಣ್ಣ ಕರಿಯಪ್ಪ ಮತ್ತು ಮೂಟೆ ಕರಿಯಪ್ಪ, ಮೇಕೆ ಚಿಕ್ಕಣ್ಣ ಇವರು ಹಂಚಿಕೊಂಡಿರುತ್ತಾರೆ. ಆಸ್ತಿಯನ್ನು ಹಂಚಿಕೊಂಡ ವಿಷಯ ನನಗೆ ನನ್ನ ತಂದೆ ಹೇಳಿರುತ್ತಾರೆ. ಆಸ್ತಿಯನ್ನು ಹಂಚಿಕೊಂಡಾಗ ನನಗೆ 5-6 ವರ್ಷ ವಯಸ್ಸಿರಬಹುದು. ಪಂಚಾಯತಿ ಮೂಲಕ ಮೌಖಿಕ ವಿಭಜನೆ ಮಾಡಿಕೊಂಡಿರುತ್ತಾರೆ. ಆದರೆ ಪಂಚಾಯತಿ ಮಾಡಿದ ವ್ಯಕ್ತಿಗಳು ಯಾರು ಎಂದು ಈಗ ನನಗೆ ಗೊತ್ತಿಲ್ಲ. ಹಂಚಿಕೊಂಡ ಬಗ್ಗೆ ಬರವಣಿಗೆ ಮಾಡಿರುವುದಿಲ್ಲ. ಮೌಖಿಕ ವಿಭಜನೆಯಲ್ಲಿ ಹೊಲ ಮತ್ತು ಮನೆಗಳನ್ನು ಹಂಚಿಕೊಂಡಿರುತ್ತಾರೆ. ಹಂಚಿಕೊಂಡ ಜಮೀನಿನ ಸರ್ವೆ ನಂ.106/2 ಆಗಿರುತ್ತದೆ. ಆ ಆಸ್ತಿಯನ್ನು ಉತ್ತರ ದಕ್ಷಿಣವಾಗಿ ಹಂಚಿಕೊಂಡಿರುತ್ತಾರೆ. ಹಗ್ಗ ಹಿಡಿದು ಅಳತೆ ಮಾಡಿ ಹಂಚಿಕೊಂಡಿರುತ್ತಾರೆ.

ಅಜ್ಜಪ್ಪನ ಭಾಗಕ್ಕೆ 4 ಎಕರೆ 10 ಗುಂಟೆ ಹೋಗಿರುತ್ತದೆ. ಸದರಿ ಜಮೀನಿನ ಉತ್ತರಕ್ಕೆ ಎ ಕೆ ಗೊಲ್ಲಪ್ಪನವರ ಜಮೀನು, ಪೂರ್ವಕ್ಕೆ ಸಣ್ಣ ಕರಿಯಪ್ಪನ ಜಮೀನು, ದಕ್ಷಿಣಕ್ಕೆ ವಾದಿಗಳು ಕೊಂಡ ಜಮೀನು ಇದೆ. ವಾದಿಗಳು ಕೊಂಡ ಜಮೀನು 106/8 ಆಗಿರುತ್ತದೆ. ಪಶ್ಚಿಮಕ್ಕೆ ಮೇಕೆ ಚಿಕ್ಕಣ್ಣನ

ಜಮೀನು ಇದೆ. ಅಜ್ಜಪ್ಪನಿಗೆ 4 ಎಕರೆ 10 ಗುಂಟೆ ಮೌಖಿಕ ವಿಭಜನೆ ಆದ ಬಗ್ಗೆ ದಾಖಲಾತಿಗಳಲ್ಲಿ ಹೆಸರು ಬಂದಿರುವುದಿಲ್ಲ.

ಸಣ್ಣಕರಿಯಪ್ಪನಿಗೆ 4 ಎಕರೆ 10 ಗುಂಟೆ ಮೌಖಿಕ ವಿಭಜನೆ ಮೂಲಕ ಬಂದಿರುತ್ತದೆ. ಸದರಿ ಜಮೀನಿನ ದಕ್ಷಿಣಕ್ಕೆ ಕರಡಪ್ಪನ ಜಮೀನು, ಉತ್ತರಕ್ಕೆ ಎ ಕೆ ಕಾಲೋನಿ ತಿಮ್ಮಜ್ಜರ ಜಮೀನು, ಪಶ್ಚಿಮಕ್ಕೆ ಅಜ್ಜಪ್ಪನ ಭಾಗ, ಪೂರ್ವಕ್ಕೆ ಮೂಟೆ ಕರಿಯಪ್ಪನ ಜಮೀನು ಇದೆ. ಸದರಿ ವಿಭಜನೆಯಂತೆ ಪಹಣಿಯಲ್ಲಿ ಸಣ್ಣ ಕರಿಯಪ್ಪನ ಹೆಸರಿನಲ್ಲಿ ಇರುವುದಿಲ್ಲ.

ಮೂಟೆ ಕರಿಯಪ್ಪನಿಗೆ ಸದರಿ ಪಾಲುವಿಭಾಗದಲ್ಲಿ 4 ಎಕರೆ 10 ಗುಂಟೆ ಜಮೀನು ಹೋಗಿರುತ್ತದೆ. ಪಶ್ಚಿಮಕ್ಕೆ ಸಣ್ಣಕರಿಯಪ್ಪನ ಭಾಗ, ದಕ್ಷಿಣಕ್ಕೆ ಕರಡಪ್ಪ ಜಮೀನು, ಪೂರ್ವಕ್ಕೆ ಗೋಪಾಲಪ್ಪನ ಜಮೀನು, ಉತ್ತರಕ್ಕೆ ಎ ಕೆ ತಿಮ್ಮಣ್ಣನ ಜಮೀನು ಇದೆ. ಸದರಿ ವಿಭಾಗದಲ್ಲಿ ಪಹಣಿ ಪತ್ರಿಕೆಗಳು ಬಂದಿರುವುದಿಲ್ಲ.

ಮೇಕೆ ಚಿಕ್ಕಣ್ಣನಿಗೆ ಸದರಿ ಪಾಲುವಿಭಾಗದಲ್ಲಿ 4 ಎಕರೆ 10 ಗುಂಟೆ ಜಮೀನು ಹೋಗಿರುತ್ತದೆ. ಪಶ್ಚಿಮಕ್ಕೆ ಓಬಣ್ಣ ಚಿಕ್ಕಣನ ಜಮೀನು, ದಕ್ಷಿಣಕ್ಕೆ ದಾಸಪ್ಪನ ಭಾಗದ ಜಮೀನು, ಪೂರ್ವಕ್ಕೆ ಅಜ್ಜಪ್ಪನ ಜಮೀನು, ಉತ್ತರಕ್ಕೆ ಎ ಕೆ ಕಾಲೋನಿ ಗೊಲ್ಲಜ್ಜನ ಜಮೀನು ಇದೆ. ಸದರಿ ವಿಭಾಗದಲ್ಲಿ ಪಹಣಿ ಪತ್ರಿಕೆಗಳು ಬಂದಿರುವುದಿಲ್ಲ. ಈಗಲೂ ಜಮೀನಿನ ಪಹಣಿ ಅಜ್ಜಪ್ಪನ ಹೆಸರಿನಲ್ಲಿ ಇದೆ ಎಂದರೆ ಸರಿ. ಮೌಖಿಕ ವಿಭಜನೆಯಂತೆ ಬದಲಾವಣೆ ಮಾಡಿಕೊಂಡಿದ್ದು ಖಾತೆ ಮಾಡಿಕೊಂಡಲ್ಲ ಎಂದರೆ ನಿಜ. ಮೌಖಿಕ ವಿಭಜನೆಯಂತೆ ಖಾತೆ ಬದಲಾವಣೆ ಮಾಡಿಕೊಳ್ಳಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ಆದರೆ ಮೌಖಿಕ ವಿಭಜನೆಯಾದಾಗ ಸ್ಥಳದಲ್ಲಿ ಇದ್ದಂತಹ ವ್ಯಕ್ತಿಗಳು ಜೀವಂತ ಇದ್ದಾರಾ ಎಂದು ಗೊತ್ತಿಲ್ಲ. ಹಂಚಿಕೊಂಡಿದ್ದನ್ನುನೋಡಿದಂತಹ ವ್ಯಕ್ತಿಗಳು ಈಗ ನಮ್ಮ ಊರಿನಲ್ಲಿ ಇರುವುದಿಲ್ಲ. ಮೌಖಿಕ ವಿಭಜನೆ ಮಾಡಿಕೊಂಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕರಿಯಪ್ಪನ 6 ಜನ ಮಕ್ಕಳು ಯಾವತ್ತೂ ಆಸ್ತಿಗಳನ್ನು

ಹಂಚಿಕೊಂಡಿಲ್ಲ ಮತ್ತು ಬದಲಾವಣೆ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಮನೆಯು ಸಣ್ಣ ಕರಿಯಪ್ಪ, ಅಜ್ಜಪ್ಪ ಮತ್ತು ಮೂಟೆ ಕರಿಯಪ್ಪನಿಗೆ ಒಂದು ಮನೆ, ದಾಸಪ್ಪನಿಗೆ 2 ಮನೆ ಬಿಟ್ಟು ಕೊಟ್ಟಿರುತ್ತಾರೆ. ಮೂರು ಮನೆಗಳನ್ನು ನಾನು ಸಣ್ಣವನಿದ್ದಾಗಲೇ ಹಂಚಿಕೊಂಡಿರುತ್ತಾರೆ. ಹಂಚಿಕೊಂಡ ಪ್ರಕಾರ ಖಾತೆ ಬಂದಿರುವುದಿಲ್ಲ. ಮೂರು ಮನೆಗಳ ಖಾತೆಯು ಅಜ್ಜಪ್ಪನ ಹೆಸರಿಗೆ ಇರುತ್ತವೆ. ಅಜ್ಜಪ್ಪನಿಗೆ ಅವರ ತಂದೆ ತೀರಿಕೊಂಡ ನಂತರ ಪೌತಿಖಾತೆ ಮೂಲಕ ವರ್ಗಾವಣೆಯಾಗಿರುತ್ತದೆ.

ಬಾಲೇನಹಳ್ಳಿಯಲ್ಲಿರುವ ಒಂದು ಮನೆ ಮೇಕೆ ಚಿಕ್ಕಣ್ಣನಿಗೆ, ಇನ್ನೊಂದು ಮನೆ ನನ್ನ ದೊಡ್ಡಪ್ಪ ಅಜ್ಜಪ್ಪ, ಸಣ್ಣ ಕರಿಯಪ್ಪ, ಮೂಟೆ ಕರಿಯಪ್ಪನಿಗೆ ಬಂದಿದೆ. ಹಂಚಿಕೊಂಡ ಬಗ್ಗೆ ಗೊತ್ತಿರುವುದಿಲ್ಲ. ಬಿದರಕೆರೆಯಲ್ಲಿರುವ ಮನೆ ದಾಸಪ್ಪನಿಗೆ ಹೋಗಿರುತ್ತದೆ. ಸದರಿ ಮನೆಗಳನ್ನು ಹಂಚಿಕೊಂಡಾಗ ನನಗೆ ಸುಮಾರು 10 ವರ್ಷ ವಯಸ್ಸಾಗಿತ್ತು. ಈ ರೀತಿ ಮನೆಗಳನ್ನು ಹಂಚಿಕೊಂಡ ವಿಚಾರ ನನ್ನ ತಂದೆ ಹೇಳಿರುತ್ತಾರೆ. ಪಂಚಾಯತಿಗೆ ಅರ್ಜಿಯನ್ನು ಕೊಟ್ಟಿರುವುದಿಲ್ಲ. ಗನ್ನಾಯಕನಹಳ್ಳಿ ಪಂಚಾಯತಿಗೆ ಅರ್ಜಿ ಕೊಟ್ಟು ಖಾತೆ ಮಾಡಿಕೊಳಲ್ಲ ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದಾಸಪ್ಪನವರು ತಕರಾರು ಮಾಡಿದ್ದಾರೆ ಎಂದು ಹೇಳುತ್ತಾರೆ. ನಮ್ಮತಂದೆ ತೀರಿಕೊಂಡ ನಂತರ ನಾನು ಖಾತೆ ಮಾಡಿಕೊಳ್ಳಲು ಹೋದಾಗ ತೊಂದರೆ ಕೊಟ್ಟಿರುತ್ತಾರೆ.

ಸುಮಾರು 26 ವರ್ಷಗಳ ಹಿಂದೆ 1 ನೇ ಪ್ರತಿವಾದಿಯರು ನಾವು ಖಾತೆ ಬದಲಾವಣೆ ಮಾಡಿಕೊಳ್ಳುವಾಗ ತಕರಾರ ಸಲ್ಲಿಸಿರುತ್ತಾರೆ. ನ್ಯಾಯಾಲಯದಿಂದ ನೋಟೀಸ್ ಬಂದಾಗ ತಹಶೀಲ್ದಾರರು ತಡೆಹಿಡಿದಿರುತ್ತಾರೆ. ನ್ಯಾಯಾಲಯದಲ್ಲಿ ಖಾತೆ ಮಾಡ ಬೇಡಿ ಎಂದು ತಡೆಯಾಜ್ಞೆ ಬಂದಿರುವುದಿಲ್ಲ. ನ್ಯಾಯಾಲಯದಲ್ಲಿ ಯಾವುದೇ ತಡೆಯಾಜ್ಞೆ ಇಲ್ಲ ಆದ್ದರಿಂದ ಖಾತೆ ಬದಲಾವಣೆ ಮಾಡಿ ಎಂದು ನಾವು ಕೇಳಿರುತ್ತೇವೆ. 1 ನೇ ಪ್ರತಿವಾದಿ ಲಿಖಿತ ತಕರಾರು

ಸಲ್ಲಿಸಿರುತ್ತಾರೆ. ನಾನು ಖಾತೆ ಮಾಡಿ ಎಂದು ಬರವಣಿಗೆ ಕೊಟ್ಟಿರುತ್ತೇನೆ ಮತ್ತು ವಿಲ್ ನಾಮೆಯನ್ನು ಸಹ ಕೊಟ್ಟಿರುತ್ತೇನೆ. ಭಾಗ ಮಾಡಿಕೊಂಡ ಪ್ರಕಾರ ಅವರವರ ಹೆಸರಿಗೆ ಖಾತೆ ಮಾಡಿಕೊಳ್ಳಲು ತಹಶೀಲ್ದಾರ್ ರವರಿಗೆ ಲಿಖಿತ ಅರ್ಜಿಯನ್ನು ಕೊಟ್ಟಿರುವುದಿಲ್ಲ. ಖಾತೆ ಬದಲಾವಣೆ ಮಾಡಲು ಅವರಿಗೆ ಯಾವುದೇ ತೊಂದರೆ ಇರುವುದಿಲ್ಲ.

ನನ್ನ ತಂದೆ ಹೆಸರು ಸಣ್ಣ ಕರಿಯಪ್ಪ. ನನ್ನ ತಂದೆ ತೀರಿಕೊಂಡ ನಂತರ ನಾನು ವಿಭಾಗದಂತೆ ಖಾತೆ ಬದಲಾವಣೆ ಮಾಡಿ ಕೊಡಿ ಎಂದು ಅರ್ಜಿಯನ್ನು ಕೊಟ್ಟಿರುವುದಿಲ್ಲ. ಆ ರೀತಿ ಖಾತೆ ಬದಲಾವಣೆ ಮಾಡಿಕೊಳ್ಳಲು ಅರ್ಜಿ ಕೊಡಲು ನನಗೆ ತೊಂದರೆ ಇರಲಿಲ್ಲ. ಕರಿಯಪ್ಪನ ಮಕ್ಕಳು ಮೌಖಿಕವಾಗಿ ವಿಭಾಗ ಆಗದೇ ಇದ್ದುದ್ದರಿಂದ ಯಾರೂ ಸಹ ಅರ್ಜಿ ಕೊಟ್ಟು ಖಾತೆ ಮಾಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಅಜ್ಜಪ್ಪನಾಗಲೀ ಅವರ ಹೆಂಡತಿಯಾಗಲೀ ಒಟ್ಟು ಕುಟುಂಬದ ಯಾವುದೇ ದಾಖಲೆ ಬರೆದಿಲ್ಲ ಎಂದರೆ ಸರಿಯಲ್ಲ. ಅಜ್ಜಪ್ಪನವರು ತಾನು ಮೃತ ಪಟ್ಟ ನಂತರ ಅವರ ಆಸ್ತಿ ಸಣ್ಣ ಕರಿಯಪ್ಪನಿಗೆ ಹೋಗ ಬೇಕು ಎಂದು ಹೇಳಿರುತ್ತಾರೆ. 1977 ರಲ್ಲಿ ವಿಲ್ ನಾಮೆಯಾಗಿರುತ್ತದೆ.

ನಾನು ಹುಟ್ಟಿದ ದಿನಾಂಕ ಗೊತ್ತಿರುವುದಿಲ್ಲ. ಮರಣ ಶಾಸನ ಪತ್ರವನ್ನು ನಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ಆ ದಾಖಲೆ ನೊಂದಾವಣೆಯಾಗಿರುತ್ತದೆ. 1977 ರ ವಿಲ್ ಬರೆದಿರುತ್ತಾರೆ ಎಂದು ಹೇಳುವಂತಹ ದಾಖಲಾತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಮೂಲ ಪ್ರತಿಯನ್ನು ಹಾಜರು ಪಡಿಸಿದ್ದೇನೆ. ವಿಲ್ ನಾವೆಯಲ್ಲಿ ಏನು ಒಕ್ಕಣೆ ಬರೆಯಲಾಗಿದೆ ಎಂದು ನನಗೆ ಗೊತ್ತಾಗುವುದಿಲ್ಲ. ಅಜ್ಜಪ್ಪ ಸಣ್ಣ ಕರಿಯಪ್ಪನಿಗೆ ವಿಲ್ ಬರೆದಿರುತ್ತಾರೆ. ಯಾವ ಸರ್ವೆ ನಂಬರ್ ಆಸ್ತಿ ಬರೆದಿದ್ದಾರೆ ಎಂದು ನನಗೆ ಗೊತ್ತಾಗುವುದಿಲ್ಲ. ವಿಲ್ ನಾಮೆ 2 ಹಾಳೆಯದಾಗಿರುತ್ತದೆ. ಆ ವಿಲ್ ನ ಪತ್ರ ಎಷ್ಟು ಮುಖ ಬಲೆ ಇದೆ ಎಂದು ನನಗೆ ಗೊತ್ತಿರುವುದಿಲ್ಲ. ಆ ವಿಲ್ ನಾವೆಯನ್ನು ಓದಿಸಿ ತಿಳಿದುಕೊಂಡಿರುತ್ತೇನೆ. ಆ ವಿಲ್ ನಾಮೆಗೆ

ಹಾಲಪ್ಪ, ಚಂದ್ರಪ್ಪ, ದಾಸಪ್ಪ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. ಹಾಲಪ್ಪ ಮತ್ತು ಚಂದ್ರಪ್ಪನಿಗೆ ಒಬ್ಬನೇ ತಂದೆ ಅವರ ಹೆಸರು ಚಂದಪ್ಪ. ದಾಸಪ್ಪನ ತಂದೆ ಹೆಸರು ತಿಮ್ಮಣ್ಣ. ಹಾಲಪ್ಪ ಮತ್ತು ಚಂದ್ರಪ್ಪ ನಮ್ಮ ಊರಿನವರು. ದಾಸಪ್ಪ ಕರಿಯಾಲ ಓಣಿಹಟ್ಟಿಯವರು. ವಿಲ್ ನಾಮೆ ಬರೆದ ಸಮಯದಲ್ಲಿ ನಾನು ಸಣ್ಣ ಹುಡುಗ ಆಗ ವಯಸ್ಸು ಎಷ್ಟು ಎಂದು ಹೇಳಲು ಬರುವುದಿಲ್ಲ .

ವಿಲ್ ನಾಮೆ 4 ಎಕರೆ 10 ಗುಂಟೆ ಆಗಿರುತ್ತದೆ. ಆದರ ಚೆಕ್ಕು ಬಂದಿ ದಕ್ಷಿಣಕ್ಕೆ ದಾಸಪ್ಪನವರ ಜಮೀನು, ಪೂರ್ವಕ್ಕೆ ಸಣ್ಣಕರಿಯಪ್ಪನ ಜಮೀನು, ಪಶ್ಚಿಮಕ್ಕೆ ಮೇಕೆ ಚಿಕ್ಕಣ್ಣ, ಉತ್ತರಕ್ಕೆ ಎ ಕೆ ಕಾಲೋನಿ ತಿಮ್ಮಪ್ಪನ ಜಮೀನು ಇದೆ .

**ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು